## ಕರ್ನಾಟಕದ ಆಧ್ಯಾತ್ಮಿಕ ಪರಂಪರೆ

# ನಿರುಪಮಜ್ಞಾನಿ ನಿಜಗುಣರು

**ಕುಮಾರ ನಿಜಗುಣ ಸ್ವಾಮಿಗಳು**

ಹಲವು ಮತಭೇದವಾದವನುಳಿದು ಸಂಶಯದ
ಹೊಲಬಿಲ್ಲದಾನುನೀನೆಂಬುದಳಿದು
ಸಲೆನೇಮಸೀಮೆದೋರದ ಶಂಭುಲಿಂಗವಾ
ದುಳುಮೆ ಚಿನ್ಮಾತ್ರವದು ನಿಜಕಾಣಿರೈ

ಎಂದು ನಿಗೂಢವಾದ ನಿಜದ (ಪರಮಸತ್ಯ) ಲಕ್ಷಣವನ್ನೊರೆದು, ಒರೆದುದನ್ನರಿದು, ಅರಿದುದನ್ನರುಹಿ, ಕೊನೆಗೆ ಅದೇ ನಿಜದೊಳು (ಪರಬೊಮ್ಮ) ನಿಜೈಕ್ಯ ಹೊಂದಿದ ನಿರುಪಮಜ್ಞಾನಿ ನಿಜಗುಣರು ಉತ್ತಮ ತತ್ತ್ವವೇತ್ತರು, ಶ್ರೇಷ್ಠ ದಾರ್ಶನಿಕರು, ಉದಾತ್ತ ಚಿಂತಕರು. ಜೊತೆಜೊತೆಗೆ ಅನುಪಮ ಅನುಭಾವಿಗಳು, ನಿಗಮಾಗಮ ನಿಷ್ಠರು, ಅಪೂರ್ವ ಶಿವಯೋಗನಿಷ್ಣಾತರು. ಅಷ್ಟೇ ಅಲ್ಲ, ಶಾಸ್ತ್ರರಚನಾಕೌಶಲದಲ್ಲಿ ಪಳಗಿದ ಪರಿಣತಮತಿಗಳೆನಿಸಿದ ಸರಸಋಷಿಕವಿಗಳು. ಶಾಸ್ತ್ರಬದ್ಧ ಕೈವಲ್ಯಸಾಹಿತ್ಯವನ್ನು ಅನುಭಾವಭರಿತ ಕಾವ್ಯವಾಗಿತ್ತ ಕನ್ನಡದ ಕವಿಪುಂಗವರು. ಕನ್ನಡ ಸಾಹಿತ್ಯಸರಸ್ವತಿಯನ್ನು ತಮ್ಮ ಅಖಂಡಾನುಭಾವ ಸಂಪತ್ತಿನಿಂದ ವೇದಾಂತಲಕ್ಷ್ಮಿಯನ್ನಾಗಿ, ಸಿದ್ಧಾಂತಶಕ್ತಿಯನ್ನಾಗಿ ಪರಿವರ್ತಿಸಿದ ಮಹಾನುಭಾವರು. ಮೊತ್ತ ಮೊದಲ ಕನ್ನಡ ವಿಶ್ವಕೋಶವೆಂದೇ ಪರಿಭಾವಿಸಲ್ಪಟ್ಟಿರುವ **ವಿವೇಕಚಿಂತಾಮಣಿ**ಯೆಂಬ ಮಹದ್ಗ್ರಂಥವನ್ನು ದಯಪಾಲಿಸಿದವರು; ಅದರಲ್ಲಿ ಸಂಕ್ಷಿಪ್ತವಾಗಿ ಸಂಗೀತಶಾಸ್ತ್ರವನ್ನು ಕನ್ನಡದಲ್ಲಿ ತಿಳಿಸಿಕೊಟ್ಟ ಮೊಟ್ಟಮೊದಲ ಸಂಗೀತತಜ್ಞರು.

ಇವರ ಕಾಲ, ಜೀವನ, ಗುರುಗಳ ಬಗ್ಗೆ ಬಹಳಷ್ಟು ಜಿಜ್ಞಾಸೆಗಳಿವೆ. ಆದರೆ ಇವರೇ ಬರೆದಿರುವರೆಂಬ **ಆತ್ಮತರ್ಕಚಿಂತಾಮಣಿ, ದರ್ಶನಸಾರ**ಗಳೆಂಬ ಉಪಲಬ್ಧವಾಗಿರದ ಎರಡು ಸಂಸ್ಕೃತ ಗ್ರಂಥಗಳನ್ನುಳಿದು, ಷಟ್ಶಾಸ್ತ್ರಗಳೆಂದೇ ಪ್ರಸಿದ್ಧವಾಗಿರುವ ಕನ್ನಡದ **ಪರಮಾನುಭವಬೋಧೆ, ಅನುಭವಸಾರ, ಪರಮಾರ್ಥಗೀತೆ, ಪಾರಮಾರ್ಥಪ್ರಕಾಶಿಕೆ, ಕೈವಲ್ಯಪದ್ಧತಿ** ಹಾಗೂ **ವಿವೇಕಚಿಂತಾಮಣಿ**ಗಳೆಂಬ ಆರು ಗ್ರಂಥಗಳು ಹಾಗೂ **ಪುರಾತನರ ತ್ರಿವಿಧಿ**ಯೆಂಬ ಒಂದು ಪುಟ್ಟ ಗ್ರಂಥವೂ ದೊರಕಿರುವುದು ಕನ್ನಡಿಗರ ಪುಣ್ಯವಿಶೇಷ. ಅಲ್ಲದೆ **ಅನುಭವಮುಕುರ**ವೆಂಬ ಮತ್ತೊಂದು ಗ್ರಂಥವನ್ನೂ ಸಹ ಬರೆದಿದ್ದಾರೆಂದು ಪ್ರತೀತಿಯಿದೆ.

ಪೂಜ್ಯ ಸ್ವಾಮೀಜಿಯವರು ಕೊಳ್ಳೇಗಾಲ ತಾಲ್ಲೂಕಿನ ಚಿಲುಕವಾಡಿಯ ನಿಜಗುಣ ಪ್ರತಿಷ್ಠಾನದ ಅಧ್ಯಕ್ಷರು. ಇವರು ಉತ್ತಮ ಕವಿಗಳು ಮತ್ತು ಸಾಹಿತಿಗಳು.

ನಿಜಗುಣರ ಕಾಲದ ಬಗ್ಗೆ ನಿರ್ದಿಷ್ಟವಾಗಿ ಹೇಳಲು ನಿರ್ದುಷ್ಟವಾದ ಆಧಾರಗಳು ಸಿಕ್ಕಿಲ್ಲ. ಹನ್ನೊಂದರಿಂದ ಹದಿನೆಂಟನೆಯ ಶತಮಾನದ ಪೂರ್ವಭಾಗದವರೆಗೂ ಸಂಶೋಧಕರು ಹೊಯ್ದಾಡುತ್ತಿದ್ದಾರೆ. ಆದರೆ ಹೆಚ್ಚಿನ ಸಂಶೋಧಕರು



ಹದಿನೈದನೆಯ ಶತಮಾನದ ಅಂತ್ಯ ಅಥವಾ ಹದಿನಾರನೆಯ ಶತಮಾನದ ಆದಿಯೆಂದು ಹೇಳುತ್ತಾರೆ. ಅಂತೆಯೇ ಅವರ ಜೀವನದ ಬಗ್ಗೆಯೂ ಸಾಕಷ್ಟು ಪುರಾವೆಗಳು ದೊರೆತಿಲ್ಲ. ಆದರೆ ಹೆಚ್ಚಿನ ವಿದ್ವಾಂಸರು ಅವರು ಪಾಳೆಯಗಾರರಾಗಿದ್ದರೆಂದು ನಂಬಿದ್ದಾರೆ. ಗಾಳಿಪುರವು ಅವರ ರಾಜಧಾನಿಯಾಗಿತ್ತೆಂದು ಹೇಳುತ್ತಾರೆ. ಅವರು ಪಾಳೆಯಗಾರಿಕೆಯನ್ನು ತ್ಯಜಿಸಿ, ಸಂನ್ಯಾಸವನ್ನು ಸ್ವೀಕರಿಸಿದ್ದರೆಂದು ಹೆಚ್ಚಿನವರು ನಂಬಿದ್ದಾರೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಚಿಲುಕವಾಡಿಯ ಶ್ರೀಶಂಭುಲಿಂಗಕ್ಷೇತ್ರದಲ್ಲಿರುವ 'ನಿಜಗುಣರ ಗವಿ' ಯೆಂದೇ ಪ್ರಸಿದ್ಧವಾಗಿರುವ ಗುಹೆಯಲ್ಲಿ ಅವರು ಅನುಷ್ಠಾನ ಮಾಡಿದರೆಂದು ಮಾತ್ರ ಎಲ್ಲರೂ ಒಪ್ಪುತ್ತಾರೆ. ಅವರ ಗುರುಗಳ ಬಗ್ಗೆಯೂ ಜಿಜ್ಞಾಸೆಯಿದೆ. ಶಂಭುಲಿಂಗರು, ಭುಜಲಿಂಗರು, ಚೆನ್ನಸದಾಶಿವಯೋಗಿಗಳು, ಜಿಗುನಿಯ ಮರುಳದೇವರು ಎಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಾದಿಸುತ್ತಾರೆ. ಅವರ ಕೃತಿಗಳಲ್ಲಿ ಗುರುಶಂಭುಲಿಂಗವೆಂದು ಅಂಕಿತವಿರುವುದರಿಂದ ಅವರ ಗುರುಗಳು ಶಂಭುಲಿಂಗರೆಂದು ನಂಬಬಹುದೇನೋ! ಏಕೆಂದರೆ ಅವರು ಒಂದು ಕಡೆ **ಗುರುಶಂಭುಲಿಂಗದಿಂ ಪರದೈವಮುಂಟೆ** ಎಂದಿದ್ದಾರೆ.

## ನಿಜಗುಣರು ರಚಿಸಿದ ಆರು ಗ್ರಂಥಗಳು :

### ೧. ಪರಮಾನುಭವಬೋಧೆ

ಕೈವಲ್ಯಸಾಧನೆಯಲ್ಲಿ ಇವರದು ಜ್ಞಾನಮಾರ್ಗ. ಈ ಮಾರ್ಗದ ಸಾಧನೆಯಲ್ಲಿ ಶ್ರವಣ, ಮನನ, ನಿದಿಧ್ಯಾಸನಗಳೇ ಪ್ರಮುಖ. ಅದರಂತೆ ಈ ಮೂರೂ ಸಾಧನೆಗಳಿಗೆ ಅನುಕೂಲವಾಗುವಂತೆ ಮೂರು ಗ್ರಂಥಗಳನ್ನು ರಚಿಸಿದ್ದಾರೆ. ಶ್ರವಣಕ್ಕೆ ಒತ್ತುಕೊಟ್ಟು **ಪರಮಾನುಭವಬೋಧೆ** ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದು **ಸೊಬಗಿನ ಸೋನೆ** ಎಂಬ ಛಂದಸ್ಸಿನಲ್ಲಿದೆ. ಒಟ್ಟು ೯೭೫ ಪದ್ಯಗಳಿವೆ. ಮುಮುಕ್ಷುವಿನ ಮನದಾಳಕ್ಕೆ ಸುಲಭವಾಗಿ ಇಳಿಯುವಂತೆ ಸರಸ ಸುಭಗ ಶೈಲಿಯಲ್ಲಿ ರಚಿಸಿದ್ದಾರೆ.

**ವಿರಚಿಸುವೆನು ಯಾಜ್ಞವಲ್ಕ್ಯ ಮೈತ್ರೇಯಿಯ**
**ವರಸಂವಾದವನೆ ಕನ್ನಡಮಾಗಿ**
**ಪರಮಾರ್ಥವಿದು ಪರತರವೆಂದು ಪೊಗಳೆ ವಿ**
**ಸ್ತರಮಾಗಿ ಸಾಧಕರರಿವಂತೆ**

ಎಂದು ಅವರೇ ಹೇಳಿರುವಂತೆ ಇದು ಬೃಹದಾರಣ್ಯಕ ಉಪನಿಷತ್ತಿನ 'ಮುನಿಕಾಂಡ'ದಲ್ಲಿ ಬಂದಿರುವ ಯಾಜ್ಞವಲ್ಕ್ಯ ಮೈತ್ರೇಯಿಯರ ಸಂವಾದದಂತಿದ್ದರೂ ಅದಷ್ಟೇ ಅಲ್ಲ. ಇದು ಎಲ್ಲಾ ಉಪನಿಷತ್ತುಗಳ ತಿರುಳು, ಸರಳಗನ್ನಡದಲ್ಲಿ ಸುಂದರವಾಗಿ ಸುಲಲಿತ ಶೈಲಿಯಲ್ಲಿ ಆರು ಸಂಧಿಗಳಲ್ಲಿ ನಿರೂಪಣೆಗೊಂಡಿದೆ. ಇದು ಅವರು ಪರಮಾನುಭವದ ಸೂಕ್ಷ್ಮತೆಯನ್ನು ಬಿಚ್ಚಿ ತೋರಿಸುವ ಪರಮೋತ್ಕೃಷ್ಟ ಪ್ರಕರಣಗ್ರಂಥ. ಇಲ್ಲಿ ಮುಖ್ಯವಾಗಿ ಮೊದಲ ಮೂರು ಸಂಧಿಗಳಲ್ಲಿ ಅಹಂಭ್ರಮೆ, ಅಜ್ಞಭ್ರಮೆ, ಮತ್ತು ಜಗದ್ಭ್ರಮೆಗಳನ್ನು ಪರಿಹರಿಸಿಕೊಳ್ಳುವ ಬಗೆಯನ್ನು ಮನಮುಟ್ಟುವಂತೆ ತಿಳಿಸುತ್ತಾರೆ. ಅಭ್ಯಾಸದ ಪ್ರಕಾರಗಳನ್ನೂ ಅಹಂಕಾರದ ನಿರಸನವನ್ನೂ ತಿಳಿಸುತ್ತಾ ನಿಜಸ್ವರೂಪದಲ್ಲಿ ನಮ್ಮನ್ನು ನಿಲ್ಲಿಸುತ್ತಾರೆ. ಹೀಗೆ ಮೊದಲ ಮೂರು ಸಂಧಿಗಳು ಸಾಧ್ಯಪರವಾಗಿ ಬೋಧಿಸಲ್ಪಟ್ಟಿವೆ.

ನಾಲ್ಕನೆಯ ಸಂಧಿಯನ್ನು 'ನಿಜಗುಣಯೋಗ' ವೆಂದು ಕರೆದು ಇಲ್ಲಿ ಗುರುವಾಕ್ಯವೇ ಸರ್ವಾರ್ಥಸಾಧನವೆಂದು ಪ್ರತಿಪಾದಿಸುತ್ತಾರೆ. ಬಹು ಅನುಭವಗಮ್ಯವಾಗಿ ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣವೆಂಬ ಐದು ಅಂಶಗಳು ಪರಬ್ರಹ್ಮನ ಸ್ವರೂಪ ಲಕ್ಷಣಗಳೆಂದು ವಿವರಿಸುತ್ತಾರೆ. ಇಲ್ಲಿ ಜೀವನ್ಮುಕ್ತಜ್ಞಾನಿಯನ್ನು ಯೋಗೀಶ್ವರನೆಂದು ಕರೆದು, ಅವನಿಗೆ ವಿಧಿ–ನಿಷೇಧಗಳು ಇಲ್ಲವೆಂದೂ ಅವನು ನಿಜಯೋಗದಲ್ಲಿ ಅನುಭವಕ್ಕೆ ಬರುವ ನಿರಾವರಣ ನಿಸ್ಸಮಾಧಿಯಲ್ಲಿರುತ್ತಾನೆಂದೂ ತಿಳಿಸಿದ್ದಾರೆ. ಅಂತೆಯೇ 'ಸಗುಣಯೋಗ' ಎಂಬ ಶೀರ್ಷಿಕೆಯುಳ್ಳ ಐದನೆಯ ಸಂಧಿಯಲ್ಲಿ ಅಧಿಕಾರಿಗಳನ್ನು ಉತ್ತಮೋತ್ತಮ, ಉತ್ತಮ, ಮಧ್ಯಮ ಹಾಗೂ ಅಧಮರೆಂದು ನಾಲ್ಕು ಪ್ರಭೇದಗಳಲ್ಲಿ ಗುರುತಿಸಿದ್ದಾರೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಯೆಂಬ ಅಷ್ಟಾಂಗಯೋಗಗಳಲ್ಲಿ ಎಲ್ಲಾ ರೀತಿಯ ಎಂಟು ಯೋಗಗಳು ಅಧಮನಿಗೂ, ಕಡೆಯ ಆರು ಯೋಗಗಳು ಮಧ್ಯಮನಿಗೂ, ಕೊನೆಯ ನಾಲ್ಕು ಉತ್ತಮನಿಗೂ, ಕಟ್ಟಕಡೆಯ ಧ್ಯಾನ ಹಾಗೂ ಸಮಾಧಿಗಳು ಉತ್ತಮೋತ್ತಮನಿಗೂ ಸಾಕೆಂದು ಹೇಳುತ್ತಾರೆ. ಹೀಗೆ ಸಮಾಧಿಸ್ಥಿತನಾದ ಯೋಗೀಶ್ವರನೇ ಜೀವನ್ಮುಕ್ತನೆಂದು ನಿರೂಪಿಸುತ್ತಾರೆ. ಆತನಿಗೆ ಕರ್ಮತ್ರಯದ ಸೋಂಕಿಲ್ಲವೆಂದು ಬಗೆಯುತ್ತಾರೆ. ಅನಂತರ ಪ್ರಾಸಂಗಿಕವಾಗಿ ಮಂತ್ರ, ಲಯ, ಹಠ, ರಾಜ ಹಾಗೂ ಶಿವಯೋಗಗಳನ್ನೂ, ಜ್ಞಾತೃ ವಿಕೃತಿ ಮುಂತಾದ ಯೋಗಾಂತರಾಯಗಳನ್ನೂ, ಅವುಗಳನ್ನು ಪರಿಹರಿಸಿಕೊಳ್ಳುವ ಉಪಾಯಗಳನ್ನೂ ಬಹು ಸುಂದರವಾಗಿ, ಅನುಭವಗಮ್ಯವಾಗಿ ತಿಳಿಸುತ್ತಾರೆ. ಕಡೆಯದಾದ 'ಗುರುಶಿಷ್ಯಲಕ್ಷಣಂ' ಎಂಬ ಹೆಸರಿನ ಆರನೆಯ ಸಂಧಿಯಲ್ಲಿ ಮುಮುಕ್ಷು, ಅಭ್ಯಾಸಿ, ಅನುಭವಿ, ಆರೂಢರ ಲಕ್ಷಣಗಳು, ಮುಮುಕ್ಷು ಮೊದಲಾದವರಿಗೆ ಹೇಳಲಾದ ವಿಧಿನಿಯಮಗಳನ್ನು ಹೇಳಿ, ಯೋಗೀಶ್ವರನಿಗೆ ಕರ್ಮದ್ವಯಭಾವವನ್ನು ಹೇಳುತ್ತ, ಅಂಥ ಯೋಗೀಶ್ವರನಲ್ಲಿ ಗುಣದೋಷಾದಿಗಳನ್ನು ನೋಡದೆ ಭಕ್ತಿಯನ್ನು ಮಾಡಿದರೆ ಮುಕ್ತಿ ದೊರೆಯುವುದು ಎಂದು ಘೋಷಿಸುತ್ತಾರೆ. ಅಂತ್ಯದಲ್ಲಿ **ಭಕ್ತಿ ಮಾತ್ರವನು ಮಾಡಿದೊಡೆ ಕೇಳಂಗನೆ ಮುಕ್ತಿಯನೊಲಿದೀವನೀಶನು** ಎಂಬ ವಚನದಲ್ಲಿ ಶಿವಭಕ್ತ್ಯಾಧಿಕ್ಯವನ್ನೂ **ಸರ್ವವೆಲ್ಲವನು ಚಿದಾತ್ಮ ಭಾವನೆಗಂಡು ಸರ್ವಸಮತ್ವದಿಂದಿರೆ ಭಕ್ತಿ** ಎಂದು ಸದ್ಭಕ್ತಲಕ್ಷಣಗಳನ್ನೂ ಹೇಳಿ ಈ ಪ್ರಕರಣಗ್ರಂಥದ ಪರಿಸಮಾಪ್ತಿ ಮಾಡುತ್ತಾರೆ. ಈ ಕೃತಿಯಲ್ಲಿ ಓದುಗರು ನಿಜಗುಣರ ಶಾಸ್ತ್ರಪಾಂಡಿತ್ಯ ಹಾಗೂ ಸ್ವಾನುಭವಪ್ರಭೆಗಳನ್ನು ಗುರುತಿಸಬಹುದು.

### ೨. ಅನುಭವಸಾರ

ಇನ್ನು ಮನನಕ್ಕೆ ಅನುಕೂಲವಾಗುವ ಅನುಭವಸಾರವನ್ನು ನೋಡೋಣ. ಅವರೇ ಹೇಳಿರುವಂತೆ

**ಇದು ವೇದಶಿರದರ್ಥವಿದು ಸಕಲಶಾಸ್ತ್ರೋಕ್ತ**
**ಇದು ಪುರಾತನರ ಮತವಿದು ಗುರೂಕ್ತಿ ಮ**
**ತ್ತಿದು ವೇದವಿದರ ನಿಜಮಾರ್ಗ**

ಇದು ದಶೋಪನಿಷತ್ತುಗಳ ಸಾರಸರ್ವಸ್ವ, ತ್ರಿಪದಿಯಲ್ಲಿ ರಚನೆಗೊಂಡಿದೆ. ಚಿದ್ವಿವರ್ತನಸ್ವರೂಪನಿರ್ಣಯ, ಜೀವೇಶ್ವರ ರೂಪನಿರ್ಣಯ, ಭೇದನಿರಾಕರಣ, ಅನಾತ್ಮತ್ವನಿರಾಕರಣ, ಚಿದಚಿದ್ವಿವೇಕ, ಬಂಧ–ಮುಕ್ತಲಕ್ಷಣ, ಜೀವನ್ಮುಕ್ತರ ಆನಂದಾವಿರ್ಭಾವಗಳೆಂಬ ೮ ಸಂಧಿಗಳಲ್ಲಿ ೫೩೫ ತ್ರಿಪದಿಗಳನ್ನೊಳಗೊಂಡಿದೆ. ಇದು ಮನನಕ್ಕೆ ಯೋಗ್ಯವಾದ ಗ್ರಂಥವಾಗಿರುವುದರಿಂದ ಗುರುಗಳು ಶಿಷ್ಯನಿಗೆ ಕೊಡುವ ಎಚ್ಚರಿಕೆಯನ್ನು ಬಹುವಾಗಿ ಗಮನಿಸಬೇಕು. ಹೇಳಿದ ತತ್ತ್ವಾರ್ಥವೆಲ್ಲವನ್ನೂ ಸ್ವಾನುಭವಗೋಚರವಾಗುವವರೆಗೂ ಮನನಮಾಡಬೇಕೆಂದು ನಿಜಗುಣರು ಒತ್ತಿಹೇಳುತ್ತಾರೆ; ಮಧ್ಯ ದಲ್ಲಿಯೇ ತಿಳಿಯಿತೆಂಬ ಭ್ರಾಂತಿಗೆ ಒಳಗಾಗಬಾರದೆಂದು ಎಚ್ಚರಿಸುತ್ತಾರೆ. ಇದನ್ನೆಲ್ಲಾ ಆಲಿಸಿ ಸಂತೋಷಗೊಂಡ ಶಿಷ್ಯನು ಗುರುವಿನ ಉಪಕಾರವನ್ನು ಸ್ಮರಿಸುತ್ತ, **"ದೇಶಿಕೋತ್ತಮ, ನಿನ್ನ ಕರುಣದಿಂದಾನಖಿಳಪಾಶವಿಲ್ಲದ ಪರಬ್ರಹ್ಮವಾದೆ"** ಎಂದು ಹೃತ್ಪೂರ್ವಕವಾದ ಆನಂದೋದ್ಗಾರವನ್ನು ಮಾಡುತ್ತಾನೆ.

(*ಮುಂದುವರಿಯುವುದು*)